ಮುಲ್ಕಿ ಸಹಕಾರ ಸಂಘದಲ್ಲಿ ಕಳವಾದ ಚಿನ್ನಕ್ಕೆ ಪರಿಹಾರ

320 -ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ): ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಸಹಕಾರಿ ಸಂಘದಲ್ಲಿ ಅಡವಿಟ್ಟ ಚಿನ್ನ ಕಳವಾದವರಿಗೆ ಎಷ್ಟು ಪರಿಹಾರ ಕೊಡಲಾಗಿದೆ.?

ಆ) ಜೀವ ವಿಮೆಯ ಹಣ ಪೂರ್ಣ ದೊರೆಯದಿರಲು ಕಾರಣಗಳೇನು?

ಇ) ಆರಕ್ಷಕ ಇಲಾಖೆಯಿಂದ ಪತ್ತೆ ಕಾರ್ಯ ನಡೆಸಲಾಗಿದೆ, ಸಿ.ಒ.ಡಿ. ತನಿಖೆಯನ್ನು ನಡೆಸಲಾಗಿದ್ದು, ಇದರ ವರದಿ ಸರ್ಕಾರಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ತಪ್ಪಿತಸ್ಥರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಎಸ್. ಆರ್. ಮೋರೆ(ಸಹಕಾರ ಸಚಿವರು):

ಅ) 538 ಜನರಿಗೆ ರೂ. 4,49,638 ಗಳನ್ನು ಕೊಡಲಾಗಿದೆ.

ಆ) (1) ತಾಂತ್ರಿಕ ಅಭಿಪ್ರಾಯ ಪಡೆದು ಅದರ ರೀತಿ ಭದ್ರತೆ ಕೊಠಡಿಯನ್ನು ನಿರ್ಮಿಸದಿರುವುದು?

(2) ಭದ್ರತಾ ಕೊಠಡಿ ಬಾಗಿಲಿಗೆ ಅಗತ್ಯ ಭದ್ರತೆ ಇಲ್ಲದಿರುವುದು.

(3) ಆಭರಣಗಳನ್ನು ಇಡುವ ಲಾಕರ್ ಸುಸ್ಥಿತಿಯಲ್ಲಿ ಇಲ್ಲದಿರುವುದು.

(4) ರಾತ್ರಿ ಕಾವಲುಗಾರರನ್ನು ನೇಮಿಸದಿರುವುದು.

ಇ) ಸಿ.ಒ.ಡಿ. ತನಿಖೆ ವರದಿ ಸರ್ಕಾರಕ್ಕೆ ಬಂದಿಲ್ಲ.

ಈ) ವರದಿ ಬಂದ ಮೇಲೆ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಸೇಡಂ ತಾಲ್ಲೂಕಿನ ಮದರಾನಾಗಸಪಲ್ಲಿ ಶಾಲೆಯ ಶಾಲೆಯ ಕಟ್ಟಡ ಪೂರ್ಣಗೊಳಿಸುವ ಬಗ್ಗೆ

428 - ಶ್ರೀ ಬಸವಂತರೆಡ್ಡಿ ಮೊತಕ್ಪಲ್ಲಿ(ಸೇಡಂ): ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಸೇಡಂ ತಾಲ್ಲೂಕಿನ ಮದರಾ ನಾಗಪಲ್ಲಿ ಶಾಲೆಯ ಕಟ್ಟಡ ವರ್ಷಾನುಗಟ್ಟಲೆ ಆದರೂ ಸಹ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಶಾಲೆಯ ಕಟ್ಟಡ ಮಂಜೂರಾಗಿ ಯಾವಾಗ ಪ್ರಾರಂಭ ಮಾಡಲಾಯಿತು.

ಇ) ಸುಮಾರು ಏಳೆಂಟು ವರ್ಷಗಳಿಂದ ಈ ಕಟ್ಟಡ ಅರ್ಧಕ್ಕೆ ಕಟ್ಟಿ ನಿಲ್ಲಿಸಿರುವುದಕ್ಕೆ ಜವಾಬ್ದಾರರು ಯಾರು?

ಈ) ಈ ಕಟ್ಟಡ ಅಪೂರ್ಣವಾಗಿ ಹಣ ಎತ್ತಿದ್ದು ನಿಜವೇ?

ಉ) ಕಟ್ಟಡ ಅಪೂರ್ಣವಾಗಿ ಪೂರ್ತಿ ಹಣ ಎತ್ತಿದರೆ ಇಲ್ಲಿಯವರೆಗೆ ಇವರ ಮೇಲೆ ಕೈಗೊಂಡಿರುವ ಕ್ರಮವೇನುಯ

ಊ) ಈ ಶಾಲೆಯ ಕಟ್ಟಡವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) ಬಂದಿದೆ.

ಆ) 1986-87

ಇ) ಸೇಡಂ ತಾಲ್ಲೂಕಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು

ಈ) ಹೌದು

ಈ ಕಟ್ಟಡಕ್ಕೆ ತಗಲುವ ಅಂದಾಜು ವೆಚ್ಚ ರೂ. 42,000-00 ಗಳಿಗೆ ಮಂಜೂರಾತಿ ನೀಡಲಾಗಿದ್ದು, ಈ ಪೈಕಿ 23-3-1988 ರವರೆಗೆ ರೂ. 36,074-00 ಗಳನ್ನು ಖರ್ಚು ಮಾಡಿದೆ.

ಉ) ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ, ಜಿಲ್ಲಾ ಪರಿಷತ್ ಗುಲ್ಬರ್ಗಾರವರಿಗೆ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

ಊ) ಈ ಕಟ್ಟಡವನ್ನು ಆದಷ್ಟುಬೇಗ ಪೂರ್ಣಗೊಳಿಸಲು ಮುಖ್ಯ ಕಾರ್ಯದರ್ಶಿ, ಜಿಲ್ಲಾಪರಿಷತ್, ಗುಲ್ಬರ್ಗಾ ಇವರನ್ನು ಕೋರಿದೆ.

1991ನೇ ವರ್ಷದಲ್ಲಿ ಬಳಸಲಾದ ವಿದ್ಯುಚ್ಛಕ್ತಿ

426 - ಶ್ರೀ ಸಿ.ಎಂ. ಲಿಂಗಪ್ಪ(ರಾಮನಗರ):ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991ನೇ ಜನವರಿ 1 ರಿಂದ ಡಿಸೆಂಬರ್ 31ರ ವರೆಗೆ ಹೊಸದಾಗಿ ಎಷ್ಟು ಮೆಗಾವಾಟ್ ವಿದ್ಯುಚ್ಛಕ್ತಿಯನ್ನು ಬಳಕೆ ಮಾಡಲು ಸಂಪರ್ಕವನ್ನು ಕೊಡಲಾಗಿದೆ.

ಆ) ಈ ಅವಧಿಯಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದಂತೆ ಎಷ್ಟು ಹೆಚ್ಚುವರಿ ವಿದ್ಯುಚ್ಛಕ್ತಿ ಉತ್ಪಾದನೆಯಾಗಿದೆ.

ಇ) 1992ನೇ ಸಾಲಿನಲ್ಲಿ ಎಷ್ಟು ಹೆಚ್ಚುವರಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಲು ಗುರಿ ಹಾಕಿಕೊಳ್ಳಲಾಗಿದೆ.

ಶ್ರೀ ಎಂ. ರಾಮಪ್ಪ(ಇಂಧನ ರಾಜ್ಯ ಮಂತ್ರಿಗಳು):

ಅ) 1991ನೇ ಕ್ಯಾಲೆಂಡರ್ ವರ್ಷದಲ್ಲಿ 1-1-91ರಿಂದ 31-12-91ರವರೆಗೆ ಹೊಸದಾಗಿ 645 ಮೆ.ವಾ. ವಿದ್ಯುತ್ತನ್ನು ಬಳಕೆ ಮಾಡಲು ಸಂಪರ್ಕವನ್ನು ನೀಡಲಾಗಿದೆ.

ಆ) ಈ ಅವಧಿಯಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ 1042 ದಶಲಕ್ಷ ಯೂನಿಟ್ಟು ಹೆಚ್ಚುವರಿ ವಿದ್ಯುಚ್ಛಕ್ತಿ ಉತ್ಪಾದನೆಯಾಗಿದೆ.

ಇ) 1992ನೇ ಸಾಲಿನಲ್ಲಿ ರಾಜ್ಯದಲ್ಲಿ ಉತ್ಪಾದನೆಯಾಗುವ ವಿದ್ಯುತ್‌ನ ಪ್ರಮಾಣವು ಜೂನ್ 1992ರಿಂದ ಬರುವ ಮಳೆಯನ್ನು ಅವಲಂಬಿಸಿದೆ. ಹೀಗಾಗಿ ಈಗಲೇ ಗುರಿಯನ್ನು ಸಿದ್ದ ಪಡಿಸಲು ಸಾಧ್ಯವಿಲ್ಲ.

ರಾಜ್ಯದಲ್ಲಿ ವಿದ್ಯುತ್ ತೊಂದರೆ

201-ಶ್ರೀ ಪಿ.ಸಿ. ಸಿದ್ದನಗೌಡರ್(ಕಲಘಟಗಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರ ಹಾಗೂ ಸಾರ್ವಜನಿಕರ ಪಂಪ್‌ಸೆಟ್ಟು ಮತ್ತು ಇತರೆ ವ್ಯವಹಾರಗಳಿಗೆ ವಿದ್ಯುತ್ ಅವಲಂಬನೆ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕರ್ನಾಟಕ ರಾಜ್ಯ ವಿದ್ಯುತ್ ಮಂಡಳಿಯಿಂದ ರೈತರಿಗೆ ಹಾಗೂ ಸಾರ್ವಜನಿಕರಿಗೆ ಮೇಲಿಂದ ಮೇಲೆ ವಿದ್ಯುತ್ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?